ಜೊತೆಗೆ ಅಸಹನೆಯ ಕಿಚ್ಚೂ ಕೂಡಿಕೊಂಡು ಇನ್ನಷ್ಟು ಹಸಿವು ಭುಗಿಲೆದ್ದಿತು.

ಡಬ್ಬಿಯಂಗಡಿಯಿಂದ ತಂದ ಬಿಸ್ಕತ್ ಪ್ಯಾಕೆಟ್ಟಿನಿಂದ ಬಿಸ್ಕತ್ತು ತಿನ್ನುತ್ತಾ ಅನೀಶ ಕೇಳಿದ: "ಇನ್ನೂ ಎಷ್ಟು ಹೊತ್ತು? ಲಾಯರು ಏನಂದರು?"

"ಒಂದು ಗಂಟೆಯ ಮೇಲೆ ಕರೆಯಬಹುದು ಅಂದರು. ಆರನೇ ಕೇಸು. ಈವತ್ತಿಗೆ ನಮ್ಮದೇ ಕೊನೆ ಕೇಸು. ಬಹುಶಃ ಈವತ್ತೇ ಹಿಯರಿಂಗು ಮುಗಿಸಿ ಬಿಡ್ತಾರೆ ಅಂತಿದ್ದರು" ಎಂದ ಸತೀಶ.

"ಬೇಗನೇ ಮುಗಿಸಿದ್ದರೆ ಆಗುತ್ತಿತ್ತಪ್ಪ."

"ಲಾಯರೂ ಪ್ರಯತ್ನಿಸಿದರಂತೆ. ಆದರೆ ಆ ಡಿಎನ್‌ಎ ವರದಿ ತಯಾರಿಸಿದ ಸಾಕ್ಷಿ ತಮ್ಮೊಟ್ಟಿಗೇ ಅದನ್ನು ತೆಗೆದುಕೊಂಡು ಬರ್ತಾರಂತೆ. ಬೆಂಗಳೂರಿಂದ ಬರಬೇಕಲ್ಲ. ಅದಕ್ಕೇ ತಡವಾಗಿ ಹಾಕಿದ್ದಾರೆ" ಎಂದು ಸತೀಶ ವಿವರಿಸಿದ. ಸಾಕ್ಷಿಗೆ ಹಿಂದಿನ ದಿನವೇ ಇಳಿದುಕೊಳ್ಳಲು ವ್ಯವಸ್ಥೆ ಮಾಡಿ, ರಿಪೋರ್ಟಿನಲ್ಲಿ ಏನಿದೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿದ್ದನ್ನೂ ಹೇಳಿದ. ಸಾಕ್ಷಿ ಒಪ್ಪಿದ್ದಿದ್ದರೆ ರಿಪೋರ್ಟಿನಲ್ಲಿ ಏನಿದೆ ಅಂತ ಗೊತ್ತಾಗುತ್ತಿತ್ತು.

"ಇನ್ನೇನಿರುತ್ತೆ. ಅವ ಹಾದರಕ್ಕೆ ಹುಟ್ಟಿದವ ಅಂತಲೇ ಇರುತ್ತೆ. ಅಪ್ಪ ಅಂತಹವರಲ್ಲವಲ್ಲ!" ಎಂದ ಅನೀಶ. ಆದರೆ ಆ ಮಾತಿಗೆ ಸತೀಶ ಉತ್ತರಿಸದೇ ಹೋದಾಗ ಇವನಿಗೆ ಏನಾದರೂ ತಿಳಿದು ಗುಟ್ಟು ಮಾಡುತ್ತಿದ್ದಾನೋ ಎಂದು ಮತ್ತೆ ಸಂದೇಹ ಹುಟ್ಟಿತು.

"ಏನು ಕತೆಯೋ. ಅಪ್ಪನ ಊರಿನಲ್ಲೆ ಅವನ ವಾರಸುದಾರ ಎನ್ನಿಸಿಕೊಳ್ಳಬೇಕಂತೆ. ಅಂತೂ ಈ ನಾಟಕ ಇವತ್ತು ಕೊನೆಯಾಗುತ್ತೆ." ಸತೀಶ ತಾನು ನಿಟ್ಟುಸಿರು ಬಿಡುವುದು ಗೊತ್ತಾಗದಿರಲಿ ಅಂತ ಕಟ್ಟೆಯ ಮೇಲಿದ್ದ ದೂಳನ್ನು 'ಉಫ್, ಉಫ್' ಎಂದು ಊದಿದಂತೆ ಮಾಡಿದ.

ಗೂಡಿನಲ್ಲಿ ನೀರು ಬಿದ್ದಾಗ ಇರುವೆಗಳು ಎದ್ದೋಡುವ ಹಾಗೆ ಇದ್ದಕ್ಕಿದ್ದ ಹಾಗೆ ಕೋರ್ಟಿನ ಅಂಗಳ ಚುರುಕಾಯಿತು. 'ಅವನ' ಲಾಯರು ಕೋರ್ಟಿನ ಕಡೆಗೆ ಓಡಿದ. ಇತ್ತ ಕಾರೊಂದು ಬಂದು ಬೋಳುತಲೆಯವನೊಬ್ಬನನ್ನು ಇಳಿಸಿ ಹೋದದ್ದನ್ನು ಸತೀಶ, ಅನೀಶ ಇದ್ದಲ್ಲಿಂದಲೇ ಗಮನಿಸಿದರು. ಅವನೆ ಇರಬೇಕು ಡಿಎನ್‌ಎ ತಜ್ಞ. ಮರದಲ್ಲಿ ಕೀರೆನ್ನುತ್ತಿದ್ದ ಜೀರುಂಡೆಯ ಕರ್ಕಶ ಸದ್ದನ್ನೂ ಮೀರಿ ಕೋರ್ಟಿನ ಅಮೀನ ದಾವೆ ನಂಬರು, ಪ್ರಥಮ ವರ್ಸಸ್ ಸತೀಶ, ಅನೀಶ. ಪ್ರಥಮ ಒಂದ್ಸಾರಿ, ಸತೀಶ ಒಂದ್ಸಾರಿ, ಅನೀಶ ಒಂದ್ಸಾರಿ ಎಂದದ್ದು ಇವರಿಗೆ ಕೇಳಿಸಿದ್ದು ಅಚ್ಚರಿಯೇ.

ಕೋರ್ಟಿನಲ್ಲಿ ನ್ಯಾಯಾಧೀಶರು ಸಾಕ್ಷಿ ಯಾರು ಎಂದು ವಿಚಾರಿಸಿದರು. ಬೋಳುತಲೆಯವ ಕಟಕಟೆಗೆ ಬಂದ. ನ್ಯಾಯಾಧೀಶರು ಆ ವರದಿಯಲ್ಲಿ ಇರುವುದನ್ನು ವಿವರಿಸಲು ಹೇಳಿದರು.

ಬೋಳುತಲೆಯವ ಅದೇನೇನೋ ಹೇಳಿದ. ಸೋದರಿಕೆಯನ್ನು ತೀರ್ಮಾನಿಸಲು ವೈ ಹಾಗೂ ಇತರೆ ಕ್ರೋಮೋಸೋಮುಗಳ ಡಿಎನ್‌ಎ ಹೋಲಿಸಿದೆವು ಎಂದ. ಅಮ್ಮಅಪ್ಪ ಇದ್ದಿದ್ದರೆ ವೈ ಕ್ರೊಮೋಸೋಮಿನ ಪರೀಕ್ಷೆ ಬೇಕಾಗುತ್ತಿರಲಿಲ್ಲ. ಅವರು ಇಲ್ಲದ್ದರಿಂದ, ತಂದೆಯಿಂದ ಮಕ್ಕಳಿಗೆ ಮಾತ್ರ ಸಾಗುವ ವೈ ಕ್ರೊಮೋಸೋಮಿನ ಡಿಎನ್‌ಎ ಪರೀಕ್ಷೆ ಮಾಡಬೇಕಾಯ್ತು. ಹೀಗಾಗಿ ಹೆಚ್ಚಿನ ಸಮಯ ಬೇಕಾಯ್ತು ಎಂದು ಪರೀಕ್ಷೆಗೆ ಮೂರು ತಿಂಗಳು ಬೇಕಾಗಿದ್ದಕ್ಕೆ ಕಾರಣ ಕೊಟ್ಟ. ನಂತರ ವರದಿಯ ವಿವರವನ್ನು ಹೇಳುವಾಗ ಸತೀಶ, ಅನೀಶರು ಮೈಯೆಲ್ಲ ಕಿವಿಯಾದರು.

ಒಂದೇ ತಂದೆಯ ಮಕ್ಕಳಾದರೆ ಮೂವರಲ್ಲೂ ವೈ ಡಿಎನ್‌ಎಯಲ್ಲಿ ಸಮಾನತೆ ಇರಬೇಕು. ಒಂದೇ ತಾಯಿಯ ಮಕ್ಕಳಾದರೆ ಇತರೆ ಡಿಎನ್‌ಎಯಲ್ಲಿಯೂ ಸಾಮ್ಯತೆ ಇರುತ್ತದೆ. ನಾವು